ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮುಖ್ಯಮಂತ್ರಿಗಳು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE 21/07/2019

# ಸದನಕ್ಕೆ ಬನ್ನಿ: ಸಿಎಂ ಮನವಿ

ಬೆಂಗಳೂರು: ಸದನಕ್ಕೆ ಬಂದು ಸರಕಾರಕ್ಕೆ ಬೆಂಬಲಿಸುವಂತೆ ಅತೃಪ್ತರಿಗೆ ಮನವಿ ಮಾಡಿಕೊಂಡಿರುವ ಸಿಎಂ ಕುಮಾರಸ್ವಾಮಿ, ಬಿಜೆಪಿಯು ರಾಜ್ಯ



ರಾಜಕಾರಣವನ್ನು ಪಾತಾಳಕ್ಕೆ ಕೊಂಡೊಯ್ದಿದೆ. ಜತೆಗೆ ದೇಶದಲ್ಲಿ ಅನೈತಿಕ ರಾಜಕಾರಣಕ್ಕೆ ಮುಂದಾಗಿರುವುದು ಅತ್ಯಂತ ನೋವಿನ ಹಾಗೂ ಜಿಗುಪ್ಸೆ ತರುವ ಸಂಗತಿ ಎಂದಿದ್ದಾರೆ.

ಶಾಸಕರೆಲ್ಲ ಹಿಂದಿರುಗಿ ಬನ್ನಿ. ಎಲ್ಲವನ್ನೂ ಒಟ್ಟಿಗೆ ಕುಳಿತು ಚರ್ಚಿಸೋಣ. ಸಂವಿಧಾನದ ಆಶಯ ಉಳಿಸಲು ಜತೆಯಾಗಿ ಹೋರಾಡೋಣವೆಂದು ಮುಖ್ಯಮಂತ್ರಿ ವಿನಂತಿಸಿಕೊಂಡಿದ್ದಾರೆ.

## ಕುಮಾರಸ್ವಾಮಿಗೆ ಬಿಜೆಪಿ ತಿರುಗೇಟು

ಇದಕ್ಕೆ ತಿರುಗೇಟು ನೀಡಿರುವ ರಾಜ್ಯ ಬಿಜೆಪಿ, ಸಿಎಂ ಅವರಿಗೆ ಕುರ್ಚಿ ಕಳೆದುಕೊಳ್ಳುವ ಹೊತ್ತಿನಲ್ಲಿ ನೈತಿಕತೆಯ ಅರಿವಾಗಿದೆ ಎಂದು ವ್ಯಂಗ್ಯವಾಡಿದೆ. "ರಾಜ್ಯದ ರಾಜಕೀಯ ಇತಿಹಾಸದಲ್ಲಿ ಕುತಂತ್ರ ಮತ್ತು ಹಣಬಲದಿಂದ ಸರಕಾರಗಳನ್ನು ಅತಂತ್ರಗೊಳಿಸಿದ ಪಿತಾಮಹ ನಿಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೇಂಬುದು ಇಡೀ ಜಗತ್ತಿಗೆ ಗೊತ್ತಿದೆ. ರಾಜಕೀಯ ಪುನರ್ಜನ್ಮ ಕೊಟ್ಟ ರಾಮಕೃಷ್ಣ ಹೆಗಡೆ ಅವರಿಗೆ 1994ರಲ್ಲಿ ಹೊಡೆಸಿ ವಾಮಮಾರ್ಗದಿಂದ ಅಧಿಕಾರ ಪಡೆದುಕೊಂಡಿದ್ದು ಪ್ರಜಾಪ್ರಭುತ್ವದ ಅಣಕವಲ್ಲವೇ? ಬಿಎಸ್‌ವೈ ಸಿಎಂ ಆಗಿದ್ದಾಗ ರೆಸಾರ್ಟ್ ರಾಜಕಾರಣ ಮಾಡಿದ್ದು ನೈತಿಕತೆಯೇ," ಎಂದು ಬಿಜೆಪಿ ಲೇವಡಿ ಮಾಡಿದೆ.